ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 03-06-2024 ರಂದು ಬೊಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಸಿ ಡಿ ಎನ್ ನ್ಯಾಯವಾದಿರವರಿಂದಃ

ಈ ದಾವೆಯನ್ನು ಸಲ್ಲಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ನಾನು ನನ್ನ ವಾದ ಪತ್ರವನ್ನು ತಿಳಿದುಕೊಂಡು ಸಹಿಯನ್ನು ಮಾಡಿರುತ್ತೇನೆ. ಪ್ರತಿವಾದಿ ನಮ್ಮ ಜಮೀನಿನ ದಕ್ಷಿಣ ದಿಕ್ಕಿಗೆ ಒತ್ತುವರಿ ಮಾಡಿರುತ್ತಾರೆ ಬರೆದಿರುವ ವಿಷಯ ಸತ್ಯ ಇರುತ್ತದೆ. ನಾನು ಮೂಲತಃ ಶಿರವಾಡದ ಬಂಗಾರಪ್ಪ ನಗರದಲ್ಲಿ ಬಾಡಿಗೆ ಮನೆಯಲ್ಲಿ ವಾಸಮಾಡುತ್ತಿದ್ದೆನು. ನಾನು ಶಿರವಾಡದಲ್ಲಿ ಸುಮಾರು 15 ವರ್ಷಗಳ ಹಿಂದೆ ಮನೆಯನ್ನು ನಿರ್ಮಾಣ ಮಾಡಿರುತ್ತೇನೆ. ನಾನು ನನ್ನ ಜಮೀನಿಗೆ ತಂತಿ ಬೆಲಿಯನ್ನು ಹಾಕುವ ಸಮಯದಲ್ಲಿ ಸರ್ವೆ ಇಲಾಖೆ ಮೂಲಕ ಅಳತೆ ಮಾಡಿ ಹದ್ದುಬಸ್ತು ಮಾಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ನಾನು ಸರ್ಕಾರಿ ಸರ್ವೆಯರ್ ಮೂಲಕ ನೆಮ್ಮದಿ ಕೇಂದ್ರಕ್ಕೆ ಅರ್ಜಿಯನ್ನು ಸಲ್ಲಿಸಿ ಅಳತೆ ಕಾರ್ಯವನ್ನು ಮಾಡಿರುತ್ತೇನೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಈ ಬಗ್ಗೆ ನಾನು ನ್ಯಾಯಾಲಯಕ್ಕೆ ಸರ್ವೆ ಇಲಾಖೆಯವರು ನೀಡಿದ ಹದ್ದುಬಸ್ತು ನಕಾಶೆಯನ್ನು ಹಾಜರುಮಾಡಿರುತ್ತೇನೆ. ನಾನು ಸಲ್ಲಿಸಿದ ದಾಖಲೆಗಳಲ್ಲಿ ಸರ್ವೆ ಇಲಾಖೆಯವರು ನೀಡಿದ ಹದ್ದುಬಸ್ತು ನಕಾಶೆ ಇರುವುದಿಲ್ಲ ಎಂದರೆ ನಾನು ವಕೀಲರಿಗೆ ನೀಡಿರುತ್ತೇನೆಂದು ಸಾಕ್ಷಿ ಉತ್ತರಿಸುತ್ತಾರೆ.

ಶಿರವಾಡ ಗ್ರಾಮದ ಸರ್ವೆ ನಂ. 156/2ಡ ಕ್ಷೇತ್ರ 7 ಗುಂಟೆ 4 ಆಣೆ ವಿಸ್ತೀರ್ಣದ ಜಮೀನಿಗೆ ಒಟ್ಟು 8 ಜನ ಮಾಲೀಕರು ಇರುತ್ತಾರೆ ಮತ್ತು ಸದರಿ ಮಾಲೀಕರ ಹೆಸರು ಆಸ್ತಿಯ ಪಹಣಿಪತ್ರದಲ್ಲಿ ನಮೂದು ಇರುತ್ತದೆ ಎಂದರೆ ಸರಿ. ಸಾಕ್ಷಿಯು ಸ್ವತಃ ಸದರಿ ಪಹಣಿ ಪತ್ರದಲ್ಲಿ ಇರುವ 8 ಮಂದಿ ವಿರುದ್ಧ ನಾನು ದಾವೆ ಸಲ್ಲಿಸಿರುವುದಿಲ್ಲ ಬದಲಾಗಿ ಈ ದಾವೆಯ ಪ್ರತಿವಾದಿ ಮೀನಾ ಇವರ ವಿರುದ್ಧ ಮಾತ್ರ ದಾವೆಯನ್ನು ದಾಖಲು ಮಾಡಿರುತ್ತೇವೆ ಎಂದು ಸಾಕ್ಷ್ಯ ನುಡಿಯುತ್ತಾರೆ.ನಿ.ಪಿ-6 ರಲ್ಲಿ ಕಾಣುವ ಮನೆಯನ್ನು ಸಾಕ್ಷಿಗೆ ತೋರಿಸಲಾಗಿ ಸದರಿ ಭಾವಚಿತ್ರದಲ್ಲಿ ಕಾಣುವ ತನಗೆ ಸೇರಿದ ಮನೆಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಪಿ-6(ಎ) ಎಂದು ಗುರುತಿಸಲಾಯಿತು. ಸದರಿ ನಿ.ಪಿ-6 ರಲ್ಲಿ ಕಾಣುವ ನಿ.ಪಿ-6(ಎ) ಮನೆಗೆ ಹೊಂದಿಕೊಂಡಿರುವ ಕಟ್ಟಿಗೆ ಬೆಲಿಯನ್ನು ಪ್ರತಿವಾದಿಯರು ನಿರ್ಮಾಣ ಮಾಡಿರುತ್ತಾರೆ. ಸದರಿ ಕಟ್ಟಿಗೆ ಬೇಲಿಯ ಪಕ್ಕಕ್ಕೆ ಪ್ರತಿವಾದಿಗೆ ಸೇರಿದ ಒಂದು ಮನೆ ಇತ್ತು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಸ್ವತಃ ನಮ್ಮ ಜಾಗದಲ್ಲಿ ಸದರಿ ಮನೆ ಇರಲಿಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ಸದರಿ ನಿ.ಪಿ-6(ಎ) ಮನೆಯಲ್ಲಿ ಪ್ರತಿವಾದಿಯರು ವಾಸವಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂ. 156/2ಡ ರಲ್ಲಿ ಮನೆ ಇದ್ದು, ಅದು ಮಳೆಗಾಲದಲ್ಲಿ ನೀರು ತುಂಬಿಕೊಂಡು ಬಿದ್ದು ಹೋಗಿತ್ತು ಎಂದರೆ ನನಗೆ ಗೊತ್ತಿಲ್ಲ.

ಪ್ರತಿವಾದಿಯು ನನಗೆ ಸೇರಿದ ಜಾಗದಲ್ಲಿ ಅತಿಕ್ರಮಣಮಾಡಿ ಮನೆಯನ್ನು ನಿರ್ಮಾಣಮಾಡಲು ಮುಂದಾದಾಗ ನಾನು ಶಿರವಾಡ ಗ್ರಾಮ ಪಂಚಾಯತಗೆ ದೂರನ್ನು ಸಲ್ಲಿಸಿದ್ದೆನು. ಪ್ರತಿವಾದಿಗೆ ಸೇರಿದ ಹಳೆ ಮನೆಯು ನಮ್ಮ ಜಮೀನಿನಲ್ಲಿ ಇದ್ದಿರಲಿಲ್ಲ ಎಂದರೆ ಸರಿ. ಪ್ರತಿವಾದಿಯರು ನಮ್ಮ ಜಮೀನನ್ನು ಅತಿಕ್ರಮಣ ಮಾಡಿರುವ ಬಗ್ಗೆ ನಾವು ಸರ್ವೆ ಇಲಾಖೆಯಿಂದ ನಕಾಶೆಯನ್ನು ಪಡೆದುಕೊಂಡಿರುವುದಿಲ್ಲ. ಪ್ರತಿವಾದಿಯರು ನಮ್ಮ ಜಮೀನನ್ನು ಅತಿಕ್ರಮಣ ಮಾಡಿ ಮನೆ ನಿರ್ಮಾಣ ಮಾಡಿದ ಬಗ್ಗೆ ಕೇವಲ ನನ್ನ ಬಾಯಿ ಮಾತಿನ ಹೇಳಿಕೆ ಹೊರತುಪಡಿಸಿ ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ಸಂಬಂದಪಟ್ಟ ಸರ್ವೆ ನಂ. 156/2ಡ ರಲ್ಲಿ ಶಿರವಾಡ ಮನೆ ನಂ. 258 ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮನೆಯು ಮಳೆಗಾಲದಲ್ಲಿ ನೀರು ತುಂಬಿ ಬಿದ್ದು ಹೋಗಿದ್ದು ಅವರು ಗ್ರಾಮ ಪಂಚಾಯತಗೆ ಅರ್ಜಿಯನ್ನು ಸಲ್ಲಿಸಿ ಆರ್ಥಿಕ ನೆರವು ಪಡೆದು ಮನೆಯನ್ನು ನಿರ್ಮಾಣ ಮಾಡಲು ಮುಂದಾದಾಗ ಅದನ್ನು ಹೇಗಾದರೂ ತಡೆಗಟ್ಟುವ ಉದ್ದೇಶದಿಂದ ಈ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

ಗ್ರಾಮ ಪಂಚಾಯತರವರು ದಾವಾಸ್ತಿಗೆ ಬಂದು, ಸ್ಥಳ ಪರಿಶೀಲನೆ ಮಾಡಿ, ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯವರಿಗೆ ಸಂಬಂದಿಸಿದ ಜಾಗದಲ್ಲಿಯೇ ಅವರ ಮನೆ ಬಿದ್ದುದರಿಂದ ಗ್ರಾಮ ಪಂಚಾಯತರವರು ನೆರೆಹಾವಳಿ ಪರಿಹಾರವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯು ಮನೆಯನ್ನು ಕಟ್ಟಬಾರದು ಎನ್ನುವ ದುರುದ್ದೇಶದಿಂದ ಹೇಗಾದರೂ ಮಾಡಿ ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಹೊಸ ಮನೆಯನ್ನು ನಿರ್ಮಾಣ ಮಾಡದೇ ಈ ಹಿಂದೆ ಇದ್ದ ಮನೆಯನ್ನೆ ಮರುನಿರ್ಮಾಣ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಸರ್ವೆ ಇಲಾಖೆಗೆ ಅರ್ಜಿಯನ್ನು ಸಲ್ಲಿಸಿ ಹದ್ದುಬಸ್ತು ಮಾಡಿಕೊಳ್ಳಲು ನನ್ನದು ಯಾವುದೇ ತಕರಾರು ಇರುವುದಿಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ,**

**ಸಹಿ ಇದೆ .**

**ಸಿವಿಲ್ ನ್ಯಾಯಾಧೀಶರು ಕಾರವಾರ**